<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 403/2017

ಸಿ.ಡಬ್ಲ್ಯೂಃ 01
ಪಿ.ಡಬ್ಲ್ಯೂಃ 01

ಸಾಕ್ಷಿದಾರರ ಹೆಸರುಃ - ಮಾಲತೇಶ ರುದ್ರೋಜಿ ಕುಲಕರ್ಣಿ

ವಯಸ್ಸು - 37 ವರ್ಷ

ಉದ್ಯೋಗ - ಪುರೋಹಿತ

ವಾಸಸ್ಥಳ - ಶಾಡಂಬಿ

ದಿನಾಂಕಃ 06-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಆರೋಪಿತರು ನನಗೆ ಗೊತ್ತಿರುವುದಿಲ್ಲ.ನನ್ನ ಮತ್ತು ಆರೋಪಿತರ ನಡುವೆ ಯಾವುದೇ ಘಟನೆ ನಡೆದಿಲ್ಲ. ನಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ನನ್ನಿಂದ ಎರಡು ದಾಖಲೆಗಳಿಗೆ ಸಹಿಯನ್ನು ಪಡೆದಿರುತ್ತಾರೆ ಅದರಲಿಲ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಜಗಳವನ್ನು ನೋಡಿರುವುದಿಲ್ಲ.

ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಘಟನಾ ಜಾಗೆಯ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಘಟನಾ ಜಾಗೆಯ ಪಂಚನಾಮೆಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ  ಸರ್ಕಾರಿ ಅಭಿಯೋಜಕರಿಂದಃ</u>

ನಾನು ಕಾಟನ ಇಂಡಸ್ಟ್ರಿ ಯಲ್ಲಿ ಗೊಡೌನ ಕಟ್ಟುವಾಗ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಅದರಲ್ಲಿ ಆರೋಪಿಯು ಗೋಡೌನ ಕಟ್ಟಲು ಕಾಂಟ್ರಾಕ್ಟ ಪಡೆದಿದ್ದರು ಎಂದರೆ ಸರಿ. ಅವರ ನಡುವೆ ಎನು ಹಣಕಾಸಿನ ವ್ಯವಹಾರ ಆಗಿತ್ತು ಎಂದು ನನಗೆ ಗೊತ್ತಿಲ್ಲ. ದಿ.23-09-2016 ರಂದು ಆರೋಪಿಯು ತನಗೆ ಬರಬೇಕಾದ ಸಂಪೂರ್ಣ ಹಣ ಬಂದಿಲ್ಲ ಎಂದು ಮದ್ಯಾಹ್ನ 4.00 ಗಂಟೆ ಸಮಯಕ್ಕೆ ಕಾಟನ ಇಂಡಸ್ಟ್ರಿಗೆ ಬಂದು ಫ್ಯಾಕ್ಟರೀಯಲ್ಲಿ ಅತೀಕ್ರಮಣ ಮಾಡಿ ಇವರಲ್ಲಿ ಕೆಲಸ ಮಾಡುತ್ತಿದ್ದ ಸುಪರವೈಸರ ಆದ ಚಾಸಾ-2 ನಿತಿನ ಇವರ ಸಂಗಡ ತಂಟೆ ತೆಗೆದು ಅವನನ್ನು ಅಡ್ಡ ಗಟ್ಟಿ ತರುಬಿ ಅವಾಚ್ಯ ಶಬ್ದಗಳಿಂದ ಬೈದನು ಎಂದರೆ ಸರಿಯಲ್ಲ. ಅಂತಹ ಕೆಲಸಕ್ಕೆ ಹರಕತ ಮಾಡಿದ್ದಲ್ಲದೇ ಕೆಲಸ ಬಂದು ಮಾಡಿ ಇಲ್ಲಿಂದ ಬಿಟ್ಟು ಹೋಗರಿ ಎಂದು ಬೈದಾಡಿ ಕಂಪನಿಯಲ್ಲಿಯ ಕಾಂಕ್ರಿಟ ಹಾಕಿದ್ದನ್ನು ಕೆಡವಿ ನೂರು ರೂಪಯಿಗಳಷ್ಟು ಲುಕ್ಸಾನು ಮಾಡಿದ್ದಲ್ಲದೇ ಇಂಡಸ್ಟ್ರೀಸದಲ್ಲಿ ಜೆನರೇಟರ ಮಶೀನಿನ ವಾಯರಗಳನ್ನು ಕಿತ್ತು ಹಾಕಿ ಲುಕ್ಸಾನು ಮಾಡಿ ಕೆಲಸ ಬಂದ ಮಾಡಲಿಲ್ಲ ಎಂದರೆ ನಿಮ್ಮ ಜೀವ ತೆಗೆತೀನಿ ಅಂತ ಜೀವದ ಧಮಕಿ ಹಾಕಿದನ್ನು ಎಂದರೆ ಸರಿಯಲ್ಲ. ಈ ಘಟನೆಯನ್ನು ನಾನು ನೋಡಿ ನಿಪಿ-1 ರಂತೆ ದೂರನ್ನು ಆರೋಪಿಯ ವಿರುದ್ಧ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿ.25-09-2016 ರಂದು ಮುಂಜಾನೆ 9.15 ರಿಂದ 10.15 ರವರೆಗೆ ನಾನು ತೋರಿಸಿದ  ಘಟನಾ ಜಾಗೆಯಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿಸಿ 403/2017

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರು ಪಾಟಿಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 403/2017

ಸಿ.ಡಬ್ಲ್ಯೂಃ 04
ಪಿ.ಡಬ್ಲ್ಯೂಃ 02

ಸಾಕ್ಷಿದಾರರ ಹೆಸರುಃ - ಇಲಾಹಿ ಅಬ್ದುಲಅಜೀಸ ಮುಲ್ಲಾ

ವಯಸ್ಸು - 38 ವರ್ಷ

ಉದ್ಯೋಗ - ಗೌಂಡಿ

ವಾಸಸ್ಥಳ - ಶಿಗ್ಗಾವ

ದಿನಾಂಕಃ 06-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಈ ಪ್ರಕರಣದ ಬಗ್ಗೆ ಎನೂ ಗೊತ್ತಿರುವುದಿಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಮೇಲಿನ ವಿಳಾಸದಲ್ಲಿ ವಾಸವಾಗಿರುತ್ತೇನೆ ಗೌಂಡಿ ಕೆಲಸ ಮಾಡಿಕೊಂಡು ಕುಟುಂಬದ ಜನರೊಂದಿಗೆ ಉಪ ಜೀವನ ಮಾಡುತ್ತೇನೆ

---------------------------------------------------------------------------

---------------------------------------------------------------------------

---------------------------------------------------------------------------

ವಿಷಯ ಈ ತಮ್ಮಿಂದ ಕೇಳಿ ತಿಳಯಿತು.

ಈ ಮೇಲೆ ಓದಿ ಹೇಳಿದ ರೀತಿಯಲ್ಲಿ ನಾನು ಪೋಲಿಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-3 ಎಂದು

ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟಿಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.